***ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ***
***ಸಿಸಿ.ನಂ. 471/2018***

ಸಾಕ್ಷಿಯ ಹೆಸರುಃ ಸುನೀಲ್ ಚಾಸಾಃ 1

ತಂದೆಯ ಹೆಸರುಃ ಕೃಷ್ಣ ಶೆಟ್ಟಿ ಪ್ರಾಸಾಃ 1

ವಯಸ್ಸುಃ 22 ವರ್ಷ

ಉದ್ಯೋಗಃ ವಾಟರ್ ಮ್ಯಾನ್

ವಾಸಃ ಬಾಳಗಡಿ

ದಿನಾಂಕಃ 02/04/2019 ರಂದು ಪ್ರಮಾಣವಚನ ಬೋಧಿಸಲಾಯಿತು.

**ಃಃ ಮುಖ್ಯ ವಿಚಾರಣೆಃಃ ಮಾನ್ಯ ಅಭಿಯೋಜಕರವರಿಂದಃಃ**

ನಾನು ವಾಟರ್ ಮ್ಯಾನ್ ಕೆಲಸ ಮಾಡಲು ಓಡಾಡಲು ಅನುಕೂಲವಾಗುವಂತೆ ನಾನು ಒಂದುಪಲ್ಸರ್ ಬೈಕ್ ನಂಬರ್ ಕೆಎ-18/ಇಸಿ-2654 ನ್ನು ಇಟ್ಟುಕೊಂಡಿರುತ್ತೇನೆ. ನಾನು ದಿನಾಂಕ 03/01/2018 ರಂದು ರಾತ್ರಿ ಪಟ್ಟಣಕ್ಕೆ ಹೋಗಿ ವಾಪಾಸು ಬಂದು ರಾತ್ರಿ 9.00 ಗಂಟೆಯ ಸಮಯದಲ್ಲಿ ನನ್ನ ಬೈಕನ್ನು ನಮ್ಮ ಮನೆಯ ಶೆಡ್ ನಲ್ಲಿ ನಿಲ್ಲಿಸಿರುತ್ತೇನೆ. ಮಾರನೇ ದಿನ ಬೆಳಿಗ್ಗೆ ಅಂದರೆ 04/01/2018 ರಂದು ಬೆಳಿಗ್ಗೆ 7.00 ಗಂಟೆಯ ಸಮಯದಲ್ಲಿ ವಾಟರ್ ಮ್ಯಾನ್ ಕೆಲಸಕ್ಕೆ ಹೋಗಲು ಹೋಗಿ ನೋಡಿದಾಗ ಸದರಿ ಸ್ಥಳದಲ್ಲಿ ರಾತ್ರಿ ನಿಲ್ಲಿಸಿದ್ದ ನನ್ನ ಬೈಕ್ ಇರಲಿಲ್ಲ. ಸುತ್ತಮುತ್ತ ಪರಿಶೀಲಿಸಿ ಸ್ನೇಹಿತರು ಮತ್ತು ಸಂಬಂಧಿಕರಿಗೆ ತಿಳಿಸಿ ನಂತರ ಎಷ್ಟು ಹುಡುಕಿದರೂ ಸಿಗದಿದ್ದ ಕಾರಣ ದಿನಾಂಕ 08/01/2018 ರಂದು ಕೊಪ್ಪ ಪೋಲಿಸು ಠಾಣೆಗೆ ನನ್ನ ಬೈಕ್ ಕಳ್ಳತನವಾದ ಬಗ್ಗೆ ದೂರನ್ನು ನೀಡಿರುತ್ತೇನೆ. ಅಲ್ಲಿಯೇ ಸುತ್ತಮುತ್ತ ಹುಡುಕಿ ಸಿಗುತ್ತದೆ ಎಂದು ಭಾವಿಸಿ ಬಹಳಷ್ಟು ಹುಡುಕಾಡಿದರೂ ಬೈಕ್ ಸಿಗದ ಕಾರಣ ತಡವಾಗಿ ದೂರನ್ನು ಕೊಟ್ಟಿರುತ್ತೇನೆ. ನಾನು ಕೊಟ್ಟ ದೂರನ್ನು ನ್ಯಾಯಾಲಯದಲ್ಲಿ

ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ದೂರು ಕೊಟ್ಟ ನಂತರ ಪೋಲಿಸರು ನಮ್ಮ ಮನೆಯ ಶೆಡ್ ನ ಹತ್ತಿರ ಬಂದಿದ್ದು ನಿರ್ದಿಷ್ಟ ದಿನಾಂಕ ನೆನಪಿರುವುದಿಲ್ಲ. ಪೋಲಿಸರಿಗೆ ನಾನೇ ಬೈಕ್ ನಿಲ್ಲಿಸಿದ್ದ ಸ್ಥಳವನ್ನು ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ 4, 5 ರವರ ಸಮಕ್ಷಮದಲ್ಲಿ ಪೋಲಿಸರು ಘಟನಾ ಸ್ಥಳದ ಮಹಜರನ್ನು ಬರೆದಿರುತ್ತಾರೆ. ಸದರಿ ಮಹಜರನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ಸದರಿ ಸಮಯದಲ್ಲಿ ಪೋಲಿಸರು ಪೋಟೊವನ್ನು ಸಹ ತೆಗೆದಿದ್ದು ಸದರಿ ಪೋಟೋವನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.3 ಎಂದು, ಸಿಡಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

ನಂತರ ಸುಮಾರು 2-3 ವಾರಗಳ ನಂತರ ಪೋಲಿಸರು ಕಳ್ಳನನ್ನು ಹಿಡಿದು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ನನ್ನ ಬೈಕನ್ನು ಕಳ್ಳತನ ಮಾಡಿರುತ್ತಾನೆ ಎಂದು ತಿಳಿದು ಬಂದಿರುತ್ತದೆ. ಸ್ಥಳಕ್ಕೆ ಬಂದಿದ್ದಾಗ ಆರೋಪಿಯೇ ದಿನಾಂಕ 03/01/2018 ರಂದು ನನ್ನ ಬೈಕನ್ನು ಕಳುವು ಮಾಡಿಕೊಂಡು ಹೋಗಿರುತ್ತೇನೆ ಎಂದು ತಿಳಿಸಿರುತ್ತಾನೆ. ನಂತರದಲ್ಲಿ ಪೋಲಿಸರು ಆರೋಪಿಯಿಂದ ಬೈಕನ್ನು ಅಮಾನತುಪಡಿಸಿಕೊಂಡಿದ್ದೇವೆ ಎಂದು ಹೇಳಿದ್ದು ಅದರಂತೆ ಫೆಬ್ರವರಿ ತಿಂಗಳ 2 ನೇ ವಾರದಲ್ಲಿ ನಾನು ಕೊಪ್ಪ ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ಸದರಿ ನನ್ನ ಬೈಕನ್ನು ಕೊಪ್ಪ ಪೋಲಿಸ್ ಠಾಣೆಗೆ ಭದ್ರಾವತಿ ಪೋಲಿಸರು ನನ್ನ ಬೈಕು ಮತ್ತು ದಾಖಲೆಗಳೊಂದಿಗೆ ತಂದಿರುತ್ತಾರೆ. ಆ ಸಮಯದಲ್ಲಿ ಪೋಲಿಸರು ಮಹಜರ್ ಮಾಡಿ ಪೋಲಿಸರು ನನ್ನ ಬೈಕ್ ಮತ್ತು ದಾಖಲೆಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.5 ಎಂದು ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸದರಿ

ಸಮಯದಲ್ಲಿ ನಾನು ಬೈಕನ್ನು ಗುರುತಿಸಿ ಮಹಜರನ್ನು ಬರೆಯುವಾಗ ನನ್ನ ಜೊತೆ ಚಾಸಾ 4 ಮತ್ತು 5 ರವರೂ ಸಹ ಇದ್ದರು. ಆರೋಪಿಯನ್ನು ಗುರುತಿಸಿದ ಬಗ್ಗೆ ಮತ್ತು ಬೈಕನ್ನು ಗುರುತಿಸಿದ ಬಗ್ಗೆ ಪೋಲಿಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ಪೋಟೊದಲ್ಲಿ ನನ್ನನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಪೊಟೋವನ್ನು ಆರೋಪಿಯನ್ನು ಕರೆದುಕೊಂಡು ಬಂದ ಸಮಯದಲ್ಲಿ ತೆಗೆದಿರುತ್ತಾರೆ. ಸದರಿ ಪೋಟೊವನ್ನು ನಿಪಿ.6 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪೋಟೊದಲ್ಲಿ ನನ್ನನ್ನು ಮತ್ತು ಬೈಕನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಪೊಟೋಗಳನ್ನು ನಾನು ಬೈಕನ್ನು ಗುರುತಿಸಿ ಅಮಾನತುಪಡಿಸಿಕೊಳ್ಳುವ ಸಮಯದಲ್ಲಿ ತೆಗೆದಿರುತ್ತಾರೆ. ಪೋಟೋಗಳನ್ನು ನಿಪಿ.7 ಮತ್ತು 8 ಎಂದು ಗುರುತಿಸಲಾಯಿತು. ನಂತರದಲ್ಲಿ ಬೈಕನ್ನು ನ್ಯಾಯಾಲಯದಿಂದ ಅನುಮತಿ ಪಡೆದು ನನ್ನ ಮಧ್ಯಂತರ ವಶಕ್ಕೆ ಪಡೆದಿರುತ್ತೇನೆ. ಸದರಿ ಬೈಕನ್ನು ಈ ದಿನ ನ್ಯಾಯಾಲಯಕ್ಕೆ ತಂದಿದ್ದು ಅದನ್ನು ಗುರುತಿಸಿರುತ್ತೇನೆ. ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. (ಬೈಕನ್ನು ಮುದ್ದೆ ಮಾಲಾಗಿ ಗುರುತಿಸಿದ ನಂತರ ಅದನ್ನು ವಾಪಾಸು ಸಾಕ್ಷಿಯ ಮಧ್ಯಂತರ ವಶಕ್ಕೆ ನೀಡಲಾಯಿತು.)

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಬಿವಿಜಿ., ವಕೀಲರವರಿಂದಃ</u>**

ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ದಿನಾಂಕಃ2/04/2019 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-xxx
(ಕೆ.ಎಂ.ಗೌತಮ್)
ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಕೊಪ್ಪ

ಸಹಿ/-xxx
ಸಾಕ್ಷಿಯ ಸಹಿಃ